Reg no KK-N 12 - For Influential Publicity - 21-10-76

ಸತ್ಯವಾದಿ

SATYAVADI

60 th Diamond Jubilee Year
೬೦ನೇ ವಜ್ರಮಹೋತ್ಸವ ವರ್ಷ

★ Satyavadi Daily, Mysore 4 ★

ಸ್ಥಾಪಕರು : ಅರಮನೆ ಏರಸ್ಟೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

Cow protection

[Mahatma Gandhji]

The cow is a poem of pity ; one reads pity in the gentle animal ; She is the mother to millions of the Indian mankind Protection of the cow means protection of the whole dumb creation of God The ancient seer, whoever he was, began with the cow The appeal to the lower order of creation is all the more forceble because it is speechless

The cow is the purest type of sub-human life ; she pleads before us on behalf of the whole of the sub-human species for justice to it at the hands of man, the first among all that lives She seem to speak to us through her yes- " You are not appointed over us to kill us and eat our flesh or otherwise ill treat us, but to be our friend and guardian

The central fact of Hinduism is cow protection Cow protection to me is one of the most wonderful phenomena in human evolution ; it takes the human being beyond his species The cow to me means the entire sub-human world Man through the cow is enjoined to realize his identity which all that lives. Why the cow was selfected for apotheosis is obvious obvious to me. The cow was in India the best companion ; She was the giver of plenty : not only did she give milk, but also made agriculture possible.

ಕರ್ನಾಟಕ ಅರಣ್ಯ ಇಲಾಖೆ
ನಂ ಜ7 17 ಇಎಲ್‌ಇ ಎಸಿಟಿ-ಟಿಂಡರ್/76-77

ಸಂಕ್ಷಿಪ್ತ

ಟೆಂಡರ್‌ಪ್ರಕಟಣೆ

ಜಾ. 12-10-76

ವಿಷಯ :- ಮೈಸೂರು ಅರಣ್ಯ ವಿಭಾಗದ ಕಾಕನಕೋಟೆ ರೇಂಜ್, ಪ್ರಾಜೆಕ್ಟ್ ಟೈಗರ್‌ನ ಬಂಡೀಪುರ ಮತ್ತು ಬೇಗೂರು ರೇಂಜ್‌ಗಳು, ಮೈಸೂರು ಮತ್ತು ಬಿ. ಆರ್. ಟಿ. ಬೆಟ್ಟಗಳು, ಯಳಂದೂರು, ಪುಂಜೂರು ಮುಂತಾದವು ಚಾಮರಾಜನಗರ ವಿಭಾಗದ ಅನೆಗಳು ಇವುಗಳಿಗಾಗಿ 1976-77 ನೇ ಸಾಲಿಗೆ ಇಲ್ಲಿರುವ ಇಲಾಖೆಯ ಅನೆಗಳ ಉಪಯೋಗಕ್ಕಾಗಿ ಅನೆಗಳ ಉಡುಪುಗಳನ್ನು ಸರಬರಾಜು ಮಾಡಲು ಮತ್ತು ರಿಪೇರಿಗಳನ್ನು ಮಾಡುವುದಕ್ಕೆ ಟೆಂಡರ್.

ಮೈಸೂರು ವಿಭಾಗದ ಕಾಕನಕೋಟೆ ರೇಂಜ್, ಪ್ರಾಜೆಕ್ಟ್ ಟೈಗರ್‌ನ ಬಂಡೀಪುರ, ಬೇಗೂರು ರೇಂಜ್, ಮೈಸೂರು, ಬಿ ಆರ್. ಟಿ ಬೆಟ್ಟಗಳ ರೇಂಜ್, ಯಳಂದೂರು ಮತ್ತು ಪುಂಜೂರು ಮುಂತಾದವು ಚಾಮರಾಜನಗರ ವಿಭಾಗದ ರೇಂಜ್‌ಗಳ ಅನೆಗಳಿಗಾಗಿ 1976-77 ಕ್ಕೆ ಅಥವಾ ಹೊಸ ಟೆಂಡರ್ ಕರೆಯುವವರೆಗೆ ಯಾವುದು ಸಿದ್ಧವೋ ಅದನ್ನು ಇಲಾಖೆಯ ಅನೆಗಳ ಅನೆ ಉಡುಪುಗಳ ಸರಬರಾಜು ಮತ್ತು ರಿಪೇರಿಗಳನ್ನು ಮಾಡುವುದಕ್ಕಾಗಿ ವಿಧಾಯಕವಾದ ಟೆಂಡರ್ ಫಾರಂನಲ್ಲಿ ಮೊಹರಾದ ಟೆಂಡರ್‌ಗಳನ್ನು ಮೈಸೂರು-1, 316 ದಿವಾನ್ಸ್ ರಸ್ತೆ, ಇಲ್ಲಿರುವ, ಮೈಸೂರು ವಿಭಾಗದ ವಿಭಾಗ ಅರಣ್ಯ ಅಧಿಕಾರಿಯವರು, ಮೈಸೂರು ವಿಭಾಗ ಅರಣ್ಯ ಕಚೇರಿಯಲ್ಲಿ ಅಥವಾ ಈ ಉದ್ದೇಶಕ್ಕಾಗಿ ಅವರಿಂದ ಅಧಿಕಾರ ಹೊಂದಿದ ಮತ್ತಾವುದೇ ಅಧಿಕಾರಿಯವರು 9-11-1976 ರ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸುವರು ಎಂದು ಈ ಮೂಲಕ ಸಾರ್ವಜನಿಕರ ಸಾರ್ವತ್ರಿಕ ತಿಳಿವಳಿಕೆಗಾಗಿ ಪ್ರಕಟಿಸಿದೆ. ನಿಗದಿ ಮಾಡಿರುವ ತಾರೀಖು ಸಾರ್ವತ್ರಿಕ ರಜಾ ದಿನವಾಗಿ ಘೋಷಿತವಾಗಿದ್ದರೆ, ಮುಂದಿನ ಕೆಲಸದ ದಿನದಲ್ಲಿ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು ಮೈಸೂರಿನಲ್ಲಿರುವ, ಮೈಸೂರು ವಿಭಾಗದ ವಿಭಾಗ ಅರಣ್ಯ ಕಚೇರಿಯಲ್ಲಿ ರೂ 5 ಇದರೊಡನೆ ಶೇಕಡ 4 ಮಾರಾಟ ತೆರಿಗೆ ಮತ್ತು ಶೇಕಡ 5 ಎಫ್‌ಡಿಟಿ ಮುಂತಾದವು ಜಾರಿಯಲ್ಲಿರುವುದನ್ನು ಕೃತಿ ರೂಪಕ್ಕೆ ಪಾವತಿ ಮಾಡಿದಲ್ಲಿ 8-11-76ರ ಸಂಜೆ 5-30 ರವರೆಗೆ ಕೊಡಲ್ಪಡುವುದು ಈ ಹಣವನ್ನು ವಾಪಸು ಮಾಡಲಾಗುವುದಿಲ್ಲ

ಯಾವುದೇ ಕೆಲಸದ ದಿನದಲ್ಲಿ ಕಚೇರಿ ವೇಳೆಗಳಲ್ಲಿ ಮೈಸೂರಿನಲ್ಲಿರುವ ಮೈಸೂರು ವಿಭಾಗದ, ವಿಭಾಗ ಅರಣ್ಯ ಕಚೇರಿಯಿಂದ ಟೆಂಡರ್ ಪತ್ರಗಳು ಮುಂತಾದವುಗಳ ಹೆಚ್ಚು ವಿವರಗಳನ್ನು ಪಡೆಯಬಹುದು.

(ಜಿ. ವಿ. ನಾರಾಯಣ)
ವಿಭಾಗ ಅರಣ್ಯ ಅಧಿಕಾರಿಯವರು,
ಮೈಸೂರು.

ಕೈಗಾರಿಕೆ ಅಭಿವೃದ್ಧಿ ಅವಶ್ಯಕ

ರೇ ಬರೇಲಿ — ದೇಶದ ಅಭಿವೃದ್ಧಿಗೆ ಮತ್ತು ಜನರ ಆರ್ಥಿಕ ಸ್ವಾತಂತ್ರ್ಯಕ್ಕೆ ಗ್ರಾಮಗಳಲ್ಲಿ ಬೇಗ ಕೈಗಾರಿಕೆ ಅಭಿವೃದ್ಧಿ ಆವಶ್ಯಕ ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಕಿಸಮುರ ರೈಲ್ವೆ ಗ್ರಾಮದಲ್ಲಿ ಹರಿಜನ ಕಾಲನಿ ಶಿಲಾನ್ಯಾಸ ಮಾಡುತ್ತಾ ತಿಳಿಸಿದರು.

★

ಜನವರಿ 8 ರಿಂದ ತಿರುವಾಯೂರಿನಲ್ಲಿ ತ್ಯಾಗರಾಜರ ಆರಾಧನೆ ನಡೆಯಲಿದೆ

ಹಿಂಜರಿಯುವುದಿಲ್ಲ

ಬೊಂಬಾಯಿ — ದಾಸ್ತಾನಿನಲ್ಲಿರುವ ಹದಿನೇಳು ಮಿಲಿಯ ಟನ್ ಆಹಾರಧಾನ್ಯಗಳನ್ನು ಬೆಲೆ ಏರದಂತಿರಲು, ಅವಶ್ಯಕ ಬಿದ್ದರೆ ಉಪಯೋಗಿಸಲು ಸರ್ಕಾರ ಹಿಂಜರಿಯುವುದಿಲ್ಲವೆಂದು ಭಾರತ ಸರ್ಕಾರದ ಹಣಕಾಸು ಮಂತ್ರಿ ಶ್ರೀ ಸಿ ಸುಬ್ರಹ್ಮಣ್ಯಂ ರವರು ತಿಳಿಸಿದರು.

●

ದಕ್ಷಿಣ ರಾಜ್ಯಗಳ ಕುರಿತು ಟೀಕೆ

ಬೆಂಗಳೂರು — ದಕ್ಷಿಣ ವಲಯ ಮಂಡಲಿಯನ್ನು ಉದ್ಘಾಟನ ಮಾಡುತ್ತ, ಭಾರತ ಸರ್ಕಾರದ ಒಳಾಡಳಿತ ಮಂತ್ರಿ ಶ್ರೀ ಬ್ರಹ್ಮಾನಂದ ರೆಡ್ಡಿಯವರು ದಕ್ಷಿಣ ರಾಜ್ಯಗಳಲ್ಲಿ ಭೂ ಸುಧಾರಣೆ ನೀರಾವರಿ, ಕುಟುಂಬ ಯೋಜನೆ ಜಾರಿ ತಡವಾಗುತ್ತಿದೆಯೆಂದು ಟೀಕಿಸಿದರು

○

ಕ್ಯಾಂಟೀನ್ ಪ್ರಾರಂಭ

ಮೈಸೂರು — ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಶ್ರೀ ಸಿ ವಿ ಎಸ್ ರಾವ್ ರವರು ಮಂಗಳವಾರ 85 ಸಾವಿರ ರೂ. ವೆಚ್ಚದಲ್ಲಿ ಕಟ್ಟಲಾಗಿರುವ ಪೋಲೀಸ್ ಕ್ಯಾಂಟೀನ್ ಕಟ್ಟಡವನ್ನು ಉದ್ಘಾಟನೆ ಮಾಡಿದರು

★

ರೋಂ ನಗರದಲ್ಲಿ ಇಲಿಗಳು

ಇಟಲಿಯ ರಾಜಧಾನಿ ರೋಂ ನಗರದಲ್ಲಿ 1 ದಶ ಕೋಟಿಯಿಂದ 3 ಕೋಟಿ ವರೆಗೆ ಇಲಿಗಳು ಇವೆಯೆಂದು ಇವುಗಳನ್ನು ನಾಶ ಮಾಡಲು 2 ವರ್ಷಗಳ ಅವಧಿಗೆ 1 ಮಿಲಿಯ ಡಾಲರು ತೆಗೆದಿಟ್ಟಿರುವರೆಂದು ವರದಿಯಾಗಿದೆ.

★

49 ನೇ ಕನ್ನಡ ಸಾಹಿತ್ಯ ಸಮ್ಮೇಳನ ಶಿವಮೊಗ್ಗದಲ್ಲಿ ಡಿಸೆಂಬರ 11 ರಿಂದ 3 ದಿನಗಳು ನಡೆಯಲಿದೆ.

— ರಾಮಾಯಣ ಅತಿ ಜನಪ್ರಿಯ

ನ್ಯೂಯಾರ್ಕ್‌ನಲ್ಲಿ ಕ್ವೀನ್ಸ್‌ನ ಫ್ಲಾಷಿಂಗ್ ಮೆಡೋಸ್ ಕೊರೋನಾ ಪಾರ್ಕ್‌ನಲ್ಲಿ ಬೆಸಲಿ ಕಲಾವಿದರು ಅಭಿನಯಿಸಿದ ರಾಮಾಯಣ ನಾಟಕ ಅತಿ ಜನಪ್ರಿಯವಾಗಿದ್ದು ಪೂರ್ತಿ ಅವಧಿ ನಡೆಯಿತು.

ವಿಶ್ವಸಂಸ್ಥೆ ಕೇಂದ್ರದಲ್ಲೂ ನಾಟಕ ನಡೆಯಿತು.

○

ಕತ್ತೆ ಕುದುರೆಗಳ ಮೆರವಣಿಗೆ

ಹಾಸನ — ಸ್ಥಳೀಯ ಜನರು ಮಳೆಯ ದೇವರ ಪ್ರೀತಿಗಾಗಿ ಕತ್ತೆಗಳ, ಕುದುರೆಗಳ ಮೆರವಣಿಗೆ ನಡೆಸಿದರು. ಸ್ವಲ್ಪ ಮಳೆ ಆಯಿತು.

●

ಮಳೆಗಾಗಿ ಮೆರವಣಿಗೆ

ಬೀರೂರು — ಮಳೆಗಾಗಿ ವರುಣ ದೇವರ ಪೂಜೆ ಮತ್ತು ಕತ್ತೆ ಮೆರವಣಿಗೆ ನಡೆಸಲಾಯಿತು ಮಳೆ ಆಯಿತು ಹೆಚ್ಚು ಮಳೆ ಬರುವ ನಿರೀಕ್ಷೆ ಇದೆ

○

ಪೂಜೆ ಮತ್ತು ಅನ್ನ ಸಂತರ್ಪಣೆ

ಅಜ್ಜಂಪುರ — ಮಳೆಗಾಗಿ ಸೊಲ್ಲಾಪುರದ ಶ್ರೀ ಸಿದ್ಧೇಶ್ವರ ಸ್ವಾಮಿಯವರ ಸನ್ನಿಧಿಯಲ್ಲಿ ಸಹಸ್ರಾರು ಕುಂಭಾಭಿಷೇಕ ಪೂಜೆ ನಡೆಸಲಾಯಿತು ಅನ್ನ ಸಂತರ್ಪಣೆಯು ನಡೆಯಿತು.

ವುಡ್‌ಲಾಂಡ್ 15 10 76 ರಿಂದ

ಅವೋಘ ಆರಂಭ

ಮಾ

ಧರ್ಮೇಂದ್ರ ಹೇಮಮಾಲಿನಿ ಅಭಿನಯ

ಹಿಂದಿ

ಕಲರ್

ಅಪೂರ್ವ 15 10 76ರಿಂದ

ಕುಮಾರ ವಿಜಯಂ

ಕಮಲಾ ಹಾಸನ್ ಜಯಚಿತ್ರ ಅಭಿನಯ

ತಮಿಳು ಪ್ರತಿದಿನ 3 ಪ್ರದರ್ಶನಗಳು

Contribute Liberally to
the National Defence Fund

SHAKTI
SUDHA

A Superb Tonic

"ಸತ್ಯವಾದಿ" ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

ಗೋರಕ್ಷಣ'ಕ್ಕೆ ನಕಲ ನೆರವು ನೀಡಿ

ಗೋರಕ್ಷಣೆ ಪ್ರಾಣಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, "ಗೋರಕ್ಷಣ" ವು ತನ್ನ ಬೆಳ್ಳಿ ಹಬ್ಬ ನೆರವೇರಿಸುತ್ತಿರುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ, ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, 'ಗೋರಕ್ಷಣ"ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

'ಗೋರಕ್ಷಣ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Edited Printed and Published by Dhare Nanjundaiah M S. Krishna Rao (Proprietor of the Saturday Press, Chamarajapuram, Mysore-4